# ಮಹಿಳಾ ವಿಶೇಷ


ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು

ಸಂಪುಟ 1 ಸಂಚಿಕೆ 18 Volume 1 Issue 18
Email: mahilavishesha@yahoo.com
web:www.mahilavishesha.in

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793

ಮಂಗಳವಾರ 29-12-2015

ಮೈಸೂರು
ಪುಟ 4
ಬೆಲೆ ₹ 2


## ರಾತ್ರಿಯ ಪಯಣ ಕಾದಂಬರಿ ಬಿಡುಗಡೆ



ಮೈಸೂರಿನ ಕಲಾಮಂದಿರದ ಮನೆಯಂಗಳದಲ್ಲಿ ವಿಸ್ಮಯ ಫೌಂಡೇಶನ್ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರೊ. ಜಿ. ಚಂದ್ರಶೇಖರ್ ಅನುವಾದಿಸಿರುವ ರಾತ್ರಿಯ ಪಯಣ ಕಾದಂಬರಿಯನ್ನು ಕವಯತ್ರಿ ಡಾ. ಲತಾ ರಾಜಶೇಖರ್ ಬಿಡುಗಡೆಗೊಳಿಸಿ ಕನ್ನಡದ ಕೃತಿಗಳನ್ನು ಹೆಚ್ಚಾಗಿ ಬೇರೆ ಭಾಷೆಗಳಿಗೆ ಅನುವಾದಿಸುವ ಮೂಲಕ ಅನುವಾದ ಕ್ಷೇತ್ರವನ್ನು ಶ್ರೀಮಂತಗೊಳಿಸಬೇಕೆಂದು ಕರೆ ನೀಡಿದರು.

## ಸಾಹಿತ್ಯದ ಸತ್ವ ಆಸ್ವಾದಿಸಿ: ಡಾ. ಧರಣೀದೇವಿ



ಮಾನಸ ಗಂಗೋತ್ರಿಯ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಆಯೋಜಿಸಿದ್ದ 'ಕನ್ನಡ ಭಾಷೆ ಸಾಹಿತ್ಯ; ಬಹುಶಿಸ್ತೀಯ ನೆಲೆಗಳು' ಕುರಿತು ಕಾರ್ಯಾಗಾರವನ್ನು ರಾಜ್ಯ ಪೊಲೀಸ್ ಅಕಾಡೆಮಿಯ ಡಾ. ಧರಣೀದೇವಿ ಮಾಲಗತ್ತಿ ಉದ್ಘಾಟಿಸಿ ಮಾತನಾಡುತ್ತಾ ಯಾವುದೇ ಶಾಸ್ತ್ರದ ಕೃತಿಯನ್ನು ಬೇರೆ ಬೇರೆ ಮಾರ್ಗದಲ್ಲಿ ಪ್ರವೇಶಿಸಿ ಅಧ್ಯಯನ ನಡೆಸಬೇಕು. ಆ ಶಾಸ್ತ್ರದ ಬಗ್ಗೆ ಅಪಾರ ಜ್ಞಾನ ಬೇಕು. ಆಗ ಆ ಕೃತಿಯಲ್ಲಿರುವ ಸಾಹಿತ್ಯದ ಸತ್ವ ತಿಳಿಯುತ್ತದೆ ಎಂದು ತಿಳಿಸಿದರು.

## ಸೋಬಾನೆ ಸಣ್ಣಮ್ಮಗೆ ಪ್ರಶಸ್ತಿ



ಮೈಸೂರು ಎರಗನಹಳ್ಳಿಯ ನಿವಾಸಿ ಸಣ್ಣಮ್ಮ ಹಾಡುತ್ತಾ ಹಾಡುತ್ತಾ ಅವರ ತಂಡದಲ್ಲಿ ಸಿದ್ದಮ್ಮ, ನಿಂಗಮ್ಮ ಹಾಗೂ ಮಾರಮ್ಮ ಎಲ್ಲೇ ಹೋದರೂ ಈ ನಾಲ್ವರೂ ಒಟ್ಟಿಗೆ ಹಾಡುತ್ತಾರೆ ಅವರದೇ ಶೈಲಿಯಲ್ಲಿ ಪ್ರೇಕ್ಷಕರನ್ನು ರಂಜಿಸುತ್ತಾರೆ. ಸೋಬಾನೆ ಸಣ್ಣಮ್ಮರಿಗೆ ಕರ್ನಾಟಕ ಜಾನಪದ ಅಕಾಡೆಮಿ ಈ ಬಾರಿ ಪುರಸ್ಕಾರ ನೀಡಿದೆ.

## 40 ವರ್ಷದ ಬಳಿಕ ಸೌಂದರ್ಯ ಸ್ಪರ್ಧೆ




ಇರಾಕ್‌ನಲ್ಲಿ 1972ರ ಬಳಿಕ ಇದೇ ಮೊದಲ ಬಾರಿ ಸೌಂದರ್ಯ ಸ್ಪರ್ಧೆ ನಡೆದಿದ್ದು ಬಾರಿ ಸೌಂದರ್ಯ ಸ್ಪರ್ದೆ ನಡೆದಿದ್ದು ಕಿರ್ಕುಕ್‌ನ 20 ವರ್ಷದ ಯುವತಿ ಶಾಯಿಮಾ ಅಬ್ಡೆಲ್‌ರಹ್ಮಾನ್ ಮಿಸ್ ಇರಾಕ್ ಆಗಿ ಆಯ್ಕೆಯಾಗಿದ್ದಾರೆ. ಬಾಗ್ದಾದ್‌ನಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಹೈ ಹೀಲ್ಡ್ ಪಾದರಕ್ಷೆ, ಸ್ಲೀವ್‌ಲೆಸ್ ಡ್ರೆಸ್ ಹಾಕಲು ಅವಕಾಶ ನೀಡಲಾಗಿತ್ತು. ಆದರೆ ಮೊಣಕಾಲಿಗಿಂತ ಮೇಲಿರುವ ಉಡುಪನ್ನು ಧರಿಸುವಂತಿರಲಿಲ್ಲ.

## ಸರಿಗಮಪ : ಸುಪ್ರಿಯಾ ವಿಜೇತೆ



ಸರಿಗಮಪ ಲಿಟಲ್ ಚಾಂಪ್ಸ್ ಸ್ಪರ್ಧೆ ಜೀ ಕನ್ನಡ ಟಿವಿಯಲ್ಲಿ ಪ್ರತಿವಾರ ಕಾರ್ಯಕ್ರಮ ಕಳೆದ ಮೂರು ತಿಂಗಳಿಂದ ಪೈಪೋಟಿ ನೀಡಿದ ಪುಟಾಣಿಗಳು ಫೈನಲ್ ಹಂತ ತಲುಪಿದ್ದು ಅಂತಿಮವಾಗಿ ಬೆಂಗಳೂರಿನ ಸುಪ್ರಿಯಾ ವಿಜೇತರಾದರು. ಅವರಿಗೆ ಐದು ಲಕ್ಷ ರೂ. ಬಹುಮಾನ ಹಾಗೂ ಟ್ರೋಫಿಯೊಂದಿಗೆ ಸನ್ಮಾನಿಸಲಾಯಿತು.



ತಮಾಷೆಯ ಮಾತುಕತೆ ಜೊತೆಗೆ ಅನುಶ್ರೀ ಅವರ ಡ್ಯಾನ್ಸ್ ಪ್ರದರ್ಶನ ಕೂಡಾ ಫೈನಲ್‌ನಲ್ಲಿ ವಿಶೇಷತೆಯಿಂದ ಕೂಡಿತ್ತು. ಎಲ್ಲಾ ತೀರ್ಪುಗಾರರು ವೇದಿಕೆಯಲ್ಲಿದ್ದ ಪ್ರೇಕ್ಷಕರು ಹಾಗೂ ಪ್ರಸಾರ ಕಾರ್ಯಕ್ರಮವನ್ನು ವೀಕ್ಷಿಸಿದ ಅಭಿಮಾನಿಗಳು ಸಂತೋಷದಲ್ಲಿ ತೇಲಿ ಖುಷಿಪಟ್ಟರು.

## ಜಯಾ-ಜೇಟ್ಲಿ ಭೇಟಿ

ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಹಾಗೂ ತಮಿಳುನಾಡು ಸಿಎಂ ಜಯಲಲಿತಾ ಕಳೆದ ವಾರ ಮಾತುಕತೆ ನಡೆಸಿ ಮಳೆಯಿಂದಾಗಿ ರಾಜ್ಯದಲ್ಲಿ ಸುಮಾರು ಎಂಟುಸಾವಿರ ಕೋಟಿ ರೂ. ಹಾನಿ ಸಂಭವಿಸಿದ್ದುಸ ಕೇಂದ್ರ ಸರ್ಕಾರ ತಕ್ಷಣ ಎರಡು ಸಾವಿರ ಕೋಟಿ ರೂ. ಪರಿಹಾರ ಘೋಷಿಸಬೇಕು ಎಂದು ಜಯಾ ಆಗ್ರಹಿಸಿದ್ದಾರೆ.

## ಸಿರಿಗನ್ನಡ ಮಹಿಳಾ ವೇದಿಕೆ

ಸಿರಿಗನ್ನಡ ಮಹಿಳಾ ವೇದಿಕೆಯ ಮೈಸೂರು ಅಧ್ಯಕ್ಷರಾಗಿ ದಾಕ್ಷಾಯಿಣಿಯವರನ್ನು ಹಾಗೂ ಮೈಸೂರು ಜಿಲ್ಲಾ ಅಧ್ಯಕ್ಷರಾಗಿ ನಾಗರತ್ನ ಅವರನ್ನು ಆಯ್ಕೆ ಮಾಡಲಾಗಿದೆ

## ಮತ್ಸ್ಯ ಕನ್ಯೆ ವೇಷಧಾರಿ ಪುಟಾಣಿ



ಕೊಡಗು ಜಿಲ್ಲೆಯ ಶನಿವಾರ ಸಂತೆಯ ಕಾವೇರಿ ಕಾಲೇಜಿನ "ಕಾವೇರಿ ಸಂಭ್ರಮ" ದ ಅಂತರ ಪ್ರೌಢಶಾಲೆಯಲ್ಲಿ ನಡೆದ ಛದ್ಮ ವೇಷ ಸ್ಪರ್ಧೆಯಲ್ಲಿ "ಮತ್ಸ್ಯ ಕನ್ಯೆ"ವೇಷಧಾರಿ ಪುಟಾಣಿ ಎಲ್ಲರ ಗಮನ ಸೆಳೆದದ್ದು ವಿಶೇಷವಾಗಿತ್ತು.

## ಸರಿತಾ ದೇವಿ ಚಾಂಪಿಯನ್



ಮಣಿಪುರದ ಸರಿತಾದೇವಿ ಕಳೆದ ವಾರ ಬೆಳಗಾವಿಯಲ್ಲಿ ಮುಕ್ತಾಯವಾದ ಸತೀಶ್ ಶುಗರ್ಸ್ ರಾಷ್ಟ್ರ ಮಟ್ಟದ ದೇಹದಾಢ್ಯ ಸ್ಪರ್ಧೆಯಲ್ಲಿ ಇದೇ ಮೊದಲ ಬಾರಿಗೆ ಆಯೋಜಿಸಿದ್ದ ಮಹಿಳಾವಿಭಾಗದಲ್ಲಿಚಾಂಪಿಯನ್ ಆಗುವ ಮೂಲಕ ಒಂದು ಲಕ್ಷ ರೂ. ಬಹುಮಾನ ಜಯಿಸಿದರು.

## ಮಕ್ಕಳಿಗೆ ನೀತಿ ಕತೆ ಹೇಳಿ: ಆರ್ಯಾಂಬ ಪಟ್ಟಾಭಿ



ಮೈಸೂರಿನ ರೋಟರಿ ಸಭಾಂಗಣದಲ್ಲಿ ರಮ್ಯ ಕ್ರಿಯೇಷನ್ಸ್ ವತಿಯಿಂದ ಕಳೆದವಾರ ಸಿ. ತ್ರಿವೇಣಿ ಅವರ 'ವಿಶ್ವವಿಖ್ಯಾತ ಜಾನಪದ ಕತೆಗಳು' ಪುಸ್ತಕವನ್ನು ಸಾಹಿತಿ ಆರ್ಯಾಂಬ ಪಟ್ಟಾಭಿ ಬಿಡುಗಡೆ ಮಾಡುತ್ತಾ ಈಗ ಪುಸ್ತಕ ಓದುವವರು ಹಾಗೂ ಬರೆಯುವವರ ಸಂಖ್ಯೆ ಕ್ಷೀಣಿಸುತ್ತಿದೆ. ಅಲ್ಲದೆ ಮುಂದಿನ ವರ್ಷಗಳಲ್ಲಿ ಪುಸ್ತಕ ಓದುವವರೆ ಇಲ್ಲದಂಥ ಪರಿಸ್ಥಿತಿ ಬಂದರೂ ಅಚ್ಚರಿ ಪಡಬೇಕಿಲ್ಲ. ಇದಕ್ಕೆ ಲೇಖಕರು ಹಾಗೂ ಪ್ರಕಾಶಕರಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕು ಎಂದು ತಿಳಿಸಿದರು.

**ಕನ್ನಡ ನಾಡಿನ ಸಮಸ್ತ ಜನತೆಗೆ ಹೊಸ ವರ್ಷ 2016ರ ಹಾರ್ದಿಕ ಶುಭಾಶಯಗಳು**

**ಬದುಕೇ ಹೀಗೆ !**

'ಸರಳವಾಗಿ ಬದುಕಲು ಕಲಿಯಿರಿ;
ಇದರಿಂದ ಲೆಕ್ಕವಿಲ್ಲದಷ್ಟು ಒಳಿತುಂಟಾಗುತ್ತದೆ'"

**ನಡೆ - ನುಡಿ**

" ಹಿಂದೆ ನಡೆದಿದ್ದನ್ನೆಲ್ಲ ಮರೆತು ಮುಂದೆ ಆಗುವ ಹಾಗೂ ಆಗಬೇಕಾದವುಗಳ ಕುರಿತು ಯೋಚಿಸಿ." -ದೀಪ,ಮಂಡ್ಯ

**ಒಗಟು**

ಮರವಲ್ಲ ಗಿಡವಲ್ಲ ಮೈಯೆಲ್ಲಾ ಹಸಿರು,
ಎಲೆ ಅಡಿಕೆ ತಿನ್ನೊಲ್ಲ ತುಟಿರಂಗು ಹಚ್ಚಲ್ಲ,
ಬಾಯೆಲ್ಲಾ ಕೆಂಪು ನಾನ್ಯಾರು?

**ಹೇಗಿರಬೇಕು?**

"ಕೈಗೆಟುಕದ ಕನಸುಗಳನ್ನು ಕಾಣಬೇಡಿ. ಅದು ನಿಮ್ಮ ಮಾನಸಿಕ ಒತ್ತಡವನ್ನು ಜಾಸ್ತಿ ಮಾಡುತ್ತದೆ. "

ವೀಣಾ, ಮೈಸೂರು

**ವಿಚಿತ್ರವಾದರೂ ನಿಜ !**

"ಜರ್ಮನಿಯಲ್ಲಿ ಬಾಡಿಗೆ ಟ್ಯಾಕ್ಸಿ ಓಡಿಸುವವರು ಟ್ಯಾಕ್ಸಿ ಓಡಿಸುವಾಗ ಗಿರಾಕಿಗಳೊಂದಿಗೆ ಮಾತನಾಡುವಂತಿಲ್ಲ."

ರಮ್ಯ, ಮೈಸೂರು

**ಒತ್ತಡವನ್ನು ಒದ್ದು ನಿಲ್ಲಿ**

" ನೆಲದ ಮೇಲಿಂದ ಒಮ್ಮೆಲೇ ಮುಗಿಲಿಗೆ ಹಾರುವ ಪ್ರಯತ್ನ ಮಾಡಬೇಡಿ. ನಿಧಾನವಾಗಿ ಒಂದೊಂದೇ ಮೆಟ್ಟಿಲೇರುತ್ತ ಜೀವನದಲ್ಲಿ ಮೇಲಕ್ಕೇರಲು ಪ್ರಯತ್ನಿಸಿ."

.....ಮುಂದುವರಿಯುವುದು

## ಆರೋಗ್ಯವಂತ ಹೃದಯಕ್ಕಾಗಿ

**ಹಣ್ಣು ತಿನ್ನಿ :**



ಆರೋಗ್ಯವಂತ ಹೃದಯಕ್ಕಾಗಿ ನಿಮ್ಮ ಆಹಾರದಲ್ಲಿ ಕನಿಷ್ಟ ಐದು ಬಗೆಯ ಪ್ರೋಟೀನ್ ಯುಕ್ತ ಹಣ್ಣು ಹಾಗೂ ತರಕಾರಿಗಳಾದರೂ ಇರಲಿ. ಇವು ವಿಟಮಿನ್ ಹಾಗೂ ಪ್ರೊಟೀನ್ ಯುಕ್ತವಾಗಿದ್ದು ಎಲ್‌ಡಿಎನ್‌ನ್ನು ಕಡಿಮೆಗೊಳಿಸುವುದರಲ್ಲಿ ಸಹಾಯಕವಾಗಿದೆ. ಹಾಗೂ ಕೊಲೆಸ್ಟ್ರಾಲ್ ಹೆಚ್ಚುವುದನ್ನು ತಡೆಗಟ್ಟುವುದರಲ್ಲಿ ನೆರವಾಗುತ್ತದೆ. ಹೃದಯುವನ್ನು ಆರೋಗ್ಯದಿಂದಿಡಲು ಹಾಗೂ ಸ್ವಚ್ಛವಾಗಿರಿಸಲು ಎಲ್ಲಾ ಅವಶ್ಯಕ ಘಟಕಗಳು ಹಣ್ಣುಗಳಲ್ಲಿ ಇರುತ್ತವೆ.

## Life of 21st Century

**ALL ARE LESS**

Our Youths - Job less
Our Food - Tasteless

...Contd

## ಕಟ್ಟುವುದು ಕಠಿಣ ಕೆಡುವುದು ಸುಲಭ

ಈ ಗಾದೆ ಅತ್ಯಂತ ವ್ಯಾವಹಾರಿಕವಾದ ಗಾದೆ ಮಾತು ಒಂದು ಕಟ್ಟಡ ಅಥವಾ ಮನೆಯನ್ನು ಕಟ್ಟಬೇಕಾದರೆ ಒಂದು ಸಂಘ ಅಥವಾ ಸಂಖ್ಯೆಯನ್ನು ನೂರಾರು ಜನರ ಶ್ರಮವಿರುತ್ತದೆ. ಅರ್ಥಿಕ, ಮಾನಸಿಕ ದೈಹಿಕ ಶ್ರಮ ಪರಿಶ್ರಮದ ಒಂದು ಸುಂದರ ಕಟ್ಟಡ, ಸಂಸ್ಥೆ, ಸಂಘ ಮೈದಾಳಿ ನಿಲ್ಲುತ್ತದೆ. ಆದರೆ ಇದನ್ನು ಕೆಡವುದು ಬಹಳ ನೆಲಸಮ ಮಾಡಬಹುದು. ಉದಾಹರಣೆಗೆ ಅಮೇರಿಕಾದ ನ್ಯೂಟ್ರೇಡ್ ಸೆಂಟರ್‌ಗೆ ಉಗ್ರಗಾಮಿಗಳು ದಾಳಿ ಮಾಡಿದ್ದು ಈ ಕಟ್ಟಡ ಭವ್ಯವಾದದ್ದು ಪ್ರಪಂಚದ ಬಹುದೊಡ್ಡ ಹಣಕಾಸಿನ ವ್ಯವಹಾರ ನಡೆಯುವ ಕಟ್ಟಡ, ಆದರೆ ಒಬ್ಬ ಉಗ್ರಗಾಮಿ ಈ ಕಟ್ಟಡವನ್ನು ನೆಲಸಮಗೊಳಿಸುವಲ್ಲಿ ಸಫಲನಾದನು. ಕಟ್ಟಡ, ಸಂಘ, ಸಂಸ್ಥೆ, ಮನೆ, ಮರ ಯಾವುದೇ ಇರಲಿ ಕಟ್ಟುವುದು ಕಷ್ಟ. ಕೆಡವುದು ಬಹಳ ಸುಲಭ. ಕೆಡುವುದರಲ್ಲಿ ಯಾವ ಲಾಭವೂ ಇರುವುದಿಲ್ಲ. ಆರ್ಥಿಕ, ಆಸ್ತಿಪಾಸ್ತಿ ಹಾಗೂ ಸಮಯದ ಹಾನಿಯೂ ಆಗುತ್ತದೆ.

ನಾವು ಯಾವಾಗಲೂ ರಚನಾತ್ಮಕ ಕಾರ್ಯಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು ವಿನಾಶದ ಕಾರ್ಯಗಳಿಂದ ದೂರವಿರಬೇಕು. ವಿನಾಶ ಸುಲಭವಾದರೂ ಆತ್ಯಂತ ಅಮಾನವೀಯವಾದದ್ದು. ಒಂದು ಮರ ಭೂಮಿ ಮೇಲೆ ಬೆಳೆಯಲು ಅನೇಕ ವರ್ಷವಾಗುತ್ತದೆ. ಮರ ಮನುಕುಲಕ್ಕೆ ಅತ್ಯಂತ ಸಹಾಯಕಾರಿ ಆದರೆ ಮಾನವ ಇದನ್ನು ಕೆಲವು ಗಂಟೆಗಳಲ್ಲಿ ಕೆಡವಿ ಪರಿಸರದ ಮಾಲಿನ್ಯಕ್ಕೆ ತುತ್ತಾಗುತ್ತಾನೆ. ಈ ಉದಾಹರಣೆ ಈ ಗಾದೆಗೆ ಪೂರಕವಾಗಿದೆ.

ನವ್ಯಶ್ರೀ, ಬೆಂಗಳೂರು

## ಚಿತ್ರನೋಡಿ ಆನಂದಿಸಿ

### ಪ್ರಧಾನಿ ಮೋದಿಯವರ ರಷ್ಯಾ ಭೇಟಿಯಲ್ಲಿನ ದೃಶ್ಯಗಳು









ಆರ್. ವಿಶಾಲಾಕ್ಷಿ ಗುಂಡೂರಾವ್
ನಿವೃತ್ತ ಶಿಕ್ಷಕಿ, ಮೈಸೂರು

## ನಮ್ಮ ಮಕ್ಕಳು

ನಾವು ಮುಖ್ಯವಾಗಿ ತಿಳಿಯಬೇಕಾದ ವಿಷಯವೆಂದರೆ ಶಾಲೆಯಲ್ಲಿ ಅಂಕಗಳನ್ನು ಹೆಚ್ಚಾಗಿ ತೆಗೆಯುವ ಮಕ್ಕಳು ಮಾತ್ರ ಬುದ್ಧಿವಂತರು ಹಾಗಿಲ್ಲದಿದ್ದಲ್ಲಿ ದಡ್ಡರು ಎಂದು ಪರಿಗಣಿಸುವುದು ಬಹಳ ದುರಂತದ ವಿಷಯ. ಓದಿನಲ್ಲಿಲ್ಲದಿದ್ದರೆ ಆ ಮಗು ಕಲಾವಿದನಿರಬಹುದು, ಯಂತ್ರ ಕೌಶಲ್ಯ ಇರಬಹುದು, ಸಂಗೀತದಲ್ಲಿ ಒಲವಿರಬಹುದು.

ನೃತ್ಯದಲ್ಲಿ ಒಲವಿರಬಹುದು. ಹೀಗೆ ಓದು ಬರಹ ಅಲ್ಲದೆ ಬೇರೆ ಯಾವ ವಿಷಯದಲ್ಲಿ ಆಸಕ್ತಿ ಇದ್ದರೂ ಪ್ರೋತ್ಸಾಹ ಕೊಟ್ಟಾಗ ಆ ಮಗು ತಾನು ಇಷ್ಟ ಪಡುವ ವಿಷಯದಲ್ಲಿ ಪ್ರಾಮುಖ್ಯತೆ ಪಡೆಯುತ್ತಾನೆ.

### ಪ್ರಾರ್ಥನೆಗೆ ಹೋಗುತ್ತಿರುವ ಕರಿಷ್ಮಾ



ಕ್ರಿಸ್‌ಮಸ್ ಮಧ್ಯರಾತ್ರಿ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಲು ಬಾಲಿವುಡ್‌ನಲ್ಲಿ ಕರಿಷ್ಮಾ ಕಪೂರ ತಾಯಿ ಬಬಿತಾರೊಂದಿಗೆ ಕಾರ್ಯಕ್ರಮಕ್ಕೆ ಬರುತ್ತಿರುವುದು.



**ಹಂಪಿಯಲ್ಲಿ ಯುಕೆ ಶೈಲಿಯಲ್ಲಿ ಊಟ ಸವಿದ ವಿದೇಶಿ ಪ್ರವಾಸಿಗರು**



ಗ್ಲೋಬಲ್ ಆಲಂ ಮಹಿ2015ರ ಅಂಗವಾಗಿ ಕಲಾವಿದರು ಹೆಬ್ಬಾಳು ಕೃಷೀ ವಿವಿಸಬಾಂಗಣದಲ್ಲಿ ನೃತ್ಯ ಪ್ರದರ್ಶಿಸಿದರು.

## ಪತ್ರಿಕೆಯ ಓದುಗರಲ್ಲಿ ಹಾಗೂ ನಾಗರೀಕರಲ್ಲಿ ಮನವಿ



ವಾರಪತ್ರಿಕೆಯ ಬೆಳವಣಿಗೆಗೆ ಹಾಗೂ ಅಭಿವೃದ್ಧಿಗಾಗಿ ಧನ ಸಹಾಯ ಮಾಡುವವರು ಯಾವುದೇ ಅಂಚೆ ಕಛೇರಿಯಲ್ಲಿ ಉಳಿತಾಯ ಖಾತೆಗೆ ನಿಮ್ಮ ಕೈಲಾದಷ್ಟು ಹಣವನ್ನು ಜಮಾ ಮಾಡಿ. ಜಮಾವಾದ ಹಣಕ್ಕೆ ರಶೀತಿ ಕೊಡಲಾಗುವುದು. ಪತ್ರಿಕೆಯು ಈಗ ಆನ್‌ಲೈನ್‌ನಲ್ಲಿ www.mahilavishesha.in ಲಭ್ಯವಿದೆ. ಓದಿ ಸಹಾಯ ಮಾಡಿ, ಬೇರೆಯವರಿಗೆ ಸಹಾಯ ಮಾಡಲು ತಿಳಿಸಿ ನಿಮ ಸಹಕಾರದ ಕೈ ಸಂತೋಷದಿಂದ ನೀಡಿ.

| | | |
|---|---|---|
| ಅಂಚೆ ಕಛೇರಿ | : | ಯಾದವಗಿರಿ, ಮೈಸೂರು, ಕರ್ನಾಟಕ |
| ಖಾತೆದಾರರ ಹೆಸರು | : | ಹೆಚ್.ವಿ. ವೆಂಕಟಸುಬ್ಬರಾವ್ ಸಂಪಾದಕರು, ಮಹಿಳಾ ವಿಶೇಷ ಪತ್ರಿಕೆ |
| ಉಳಿತಾಯ ಖಾತೆಯ ಸಂಖ್ಯೆ | : | 3098204565 |

**"ನಿಮ್ಮ ಸಹಕಾರ ಸಾವಿರಾರು ಜನರಿಗೆ ಉಪಕಾರ"**



೭೬ ವರ್ಷದ ಮೈಲಾಪುರದ ಮಾಮಿ ಆಪ್‌ನಲ್ಲಿ ಅಡುಗೆ ಕಲಿಸುವ ಮಹಿಳೆ


"ಜನಶ್ರೀ ಸೋಲಾರ್ ಬಳಸಿ - ವಿದ್ಯುತ್ ಉಳಿಸಿ - ಹಣ ಗಳಿಸಿ"
Janashree Powertech India Pvt. Ltd. Karnataka
"ವಿದ್ಯುತ್ ಉಳಿಸಿ" Janashree ಜನಶ್ರೀ ಸೋಲಾರ್ SOLAR
Creating an Eco Friendly World
ಸೌರ ಮೇಲ್ಛಾವಣಿ ವ್ಯವಸ್ಥೆ
Solar Roof Top System
ಸೌರಶಕ್ತಿ ವಿದ್ಯುತ್ ಉಚಿತ : ಮಾಸಿಕ ವರಮಾನ ಖಚಿತ
Mob : 9379777793
ಮೈಸೂರು ಮಾರಾಟ ವಿಭಾಗ :
Solar Irrigation Pumps
Solar Street Lights
Solar Water Heaters
Solar UPS
Solar Fencing
Solar Cooking Systems
TURNKEY PROJECTS
ಕತ್ತಲೆಯಿಂದ ಬೆಳಕಿನಡೆಗೆ
Mob : 9379777793
Registered Under Companies Act 2013:
"ವಿದ್ಯುತ್ ಉಳಿಸಿ" Janashree ಜನಶ್ರೀ ಪವರ್‌ಟೆಕ್ ಇಂಡಿಯಾ ಪ್ರೈವೇಟ್ ಲಿ.
POWERTECH INDIA PRIVATE LIMITED
Corporate Office: # 5, 1st Main, Vaishnavi Layout, Vidyaranyapura, Bengaluru-560 097.
Mob : 99028 61001, 99162 21285 Email: janashreepipl@gmail.com
ಸೌರ ಮೇಲ್ಛಾವಣಿ ವ್ಯವಸ್ಥೆ (Solar Roof Top System)
Solar Irrigation Pump Sets
ಸೌರ ಶಕ್ತಿ ಮತ್ತು ಅದರ ಉಪಯೋಗಗಳು
Voice of Farmer's
KANNADA MONTHLY MAGAZINE
ವಾಯ್ಸ್ ಆಫ್ ಫಾರ್ಮರ್ಸ್
ಎಸ್. ರಾಮಸ್ವಾಮಿ
ನಮ್ ನ್ಯೂಸ್
S. RAMASWAMY
FOR DISTRIBUTOR AND DEALERSHIP ENQUIRIES PLEASE CONTACT : 9902861001

## ಸಾನಿಯಾ ಅಭಿಮಾನಿಗಳ ಸಂಖ್ಯೆ ಕೋಟಿ



ಸಾನಿಯಾ ಮಿರ್ಜಾ ಫೇಸ್‌ಬುಕ್‌ನ ತಮ್ಮ ಅಭಿಮಾನಿಗಳು ಥ್ಯಾಕ್ಸ್ ಹೇಳಿದ್ದಾರೆ. ತಮ್ಮ ಅಧಿಕೃತ ಪುಟದಲ್ಲಿ ಒಂದು ಶೇರ್ ಫಾಲೋಕ್ಸ್‌ಗಳ ಗಡಿದಾಟಿದ ಹಿನ್ನೆಲೆಯಲ್ಲಿ ಫೇಸ್‌ಬುಕ್ ಹಾಗೂ ಟ್ವಿಟರ್‌ನಲ್ಲಿ ಸಂದೇಶದೊಂದಿಗೆ ಫೋಟೋ ಪ್ರಕಟಿಸಿದ್ದಾರೆ.

## ಮಂಗಳೂರು ತಂಡಕ್ಕೆ ಚಾಂಪಿಯನ್



ಮಂಡ್ಯದ ಸರ್. ಎಂ. ವಿ. ಕ್ರೀಡಾಂಗಣದಲ್ಲಿ ಪಿಯು ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ ರಾಜ್ಯಮಟ್ಟದ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಯ ಬಾಲಕಿಯರ ವಿಭಾಗದಲ್ಲಿ ಮಂಗಳೂರು ತಂಡ ಪ್ರಥಮ ಬಹುಮಾನ ಪಡೆದುಕೊಂಡಿತು.

## ಸೈನಾ ನೆಹ್ವಾಲ್ ಅಭಿಪ್ರಾಯ



ಪ್ರೀಮೀಯರ್ ಬ್ಯಾಡ್ಮಿಂಟನ್ ಲೀಗ್ ರೋಚಕತೆ ಹೆಚ್ಚಿಸಲು ಅಳವಡಿಸಲಾಗಿರುವ ಟ್ರಾಂಪ್ ಮ್ಯಾಚ್ ನೂತನ ನಿಯಮಾವಳಿ ಫಲಿತಾಂಶದ ಟರ್ನಿಂಗ್ ಪಾಯಿಂಡ್ ಆಗಿರಲಿದೆ ಎಂದು ವಿಶ್ವ ನಂ. 2 ಷಟ್ಲರ್ ಸೈನಾ ನೆಹ್ವಾಲ್ ಅಭಿಪ್ರಾಯ ಪಟ್ಟಿದ್ದಾರೆ.

## ಅಮೂಲ್ಯಗೆ ಚಿನ್ನದ ಪದಕ



ಚೆನ್ನೈನಲ್ಲಿ ನಡೆದ ದಕ್ಷಿಣ ಭಾರತ ಯೋಗ ಚಾಂಪಿಯನ್ ಷಿಪ್‌ನಲ್ಲಿ ಅತ್ಯುತ್ತಮ ಯೋಗ ಪ್ರದರ್ಶನ ನೀಡುವ ಮೂಲಕ ನಗರದ ಕ್ರೈಸ್ಟ್ ಪಬ್ಲಿಕ್ ಸ್ಕೂಲ್‌ನ 4 ನೇ ತರಗತಿ ವಿದ್ಯಾರ್ಥಿನಿ ಅಮೂಲ್ಯ ನಾರಾಯಣ್ ಚಿನ್ನದ ಪದಕ ಪಡೆದು ವಿಯೆಟ್ನಾಂ ಕಾಂಟಿನೆಂಟಲ್ ಯೋಗ ಸ್ಪರ್ಧೆಗೆ ಆಯ್ಕೆಯಾಗಿದ್ದಾಳೆ.

## ರೋಷ್ಮಿತಾ ಗ್ರಾಂಡ್ ಫಿನಾಲೆಗೆ ಪ್ರವೇಶ

ಎಫ್‌ಬಿಬಿ ಫೆಮಿನಾ ಮಿಸ್ ಇಂಡಿಯಾದ ಬೆಂಗಳೂರು ಆವೃತ್ತಿಯ ಸೌಂದರ್ಯ ಸ್ಪರ್ಧೆಯಲ್ಲಿ ರೋಷ್ಮಿತಾ ಹರಿಮೂರ್ತಿ ವಿಜೇತರಾಗಿದ್ದಾರೆ. ಮೊದಲನೇ ರನ್ನರ್ ಅಪ್ ಸ್ಥಾನವನ್ನು ಎಲಿಜಬೆತ್ ತಾಖ್ರಿಯಾನ್ ಹಾಗೂ ಎರಡನೇ ರನ್ನರ್ ಅಪ್ ಸ್ಥಾನವನ್ನು ಜಿ.ಎಫ್. ಸಂಜನಾ ಪಡೆದಿದ್ದಾರೆ. ಸಂಭ್ರಮದ ಕ್ಷಣಗಳನ್ನು ಸವಿಯುತ್ತಿರುವ ಈ ಮೂವರು ಬೆಡಗಿಯರು ಸ್ಪರ್ಧೆಯ ಕುರಿತು ಅನುಭವ ಹಂಚಿಕೊಂಡರು. ಸದ್ಯದಲ್ಲೇ ಮುಂಬೈನಲ್ಲಿ ನಡೆಯಲಿರುವ 2016ರ ಗ್ರಾಂಡ್ ಫಿನಾಲೆಗೆ ಈ ಮೂವರು ಪ್ರವೇಶ ಪಡೆದಿದ್ದಾರೆ.

## ಸೋಡಾಬುಡ್ಡಿ ಚಲನ ಚಿತ್ರದಲ್ಲಿನ ದೃಶ್ಯಗಳು





ಹೊಸ ವರ್ಷದ ಶುಭಾಶಯಗಳೊಂದಿಗೆ
**ಶ್ರೀದೇವಿ ಮಹಿಳಾ ಸಂಘ,**
ರಾಮಕೃಷ್ಣನಗರ,
ಮೈಸೂರು
ಸಂಪರ್ಕಿಸಿ : 7795242873 / 8904863223

Happy New Year
**Need your own website**
at Rs. 2000/- onwards
interested contact
M : 9379777793

ಹೊಸ ವರ್ಷದ ಶುಭಾಶಯಗಳೊಂದಿಗೆ
**ಜನಶ್ರೀ ಸೋಲಾರ್**
ಮನೆಗೆ, ರೈತರಿಗೆ, ಆಫೀಸಿಗೆ ಉಪಯೋಗಿಸಬಹುದಾದಂತಹ ಸೋಲಾರ್ ಉಪಕರಣಗಳಿಗೆ ಅವಶ್ಯಕತೆ ಇರುವವರು
ಸಂಪರ್ಕಿಸಿ. ಮೊ: 9379777793

ಹೊಸ ವರ್ಷದ ಶುಭಾಶಯಗಳೊಂದಿಗೆ
**ಕೆ.ಆರ್. ಮೋಹನ್‌ಕುಮಾರ್**
ಅಧ್ಯಕ್ಷರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಜೆ.ಎಲ್.ಬಿ. ರಸ್ತೆ, ಮೈಸೂರು.
ಮೊ: 8105209999

ಹೊಸ ವರ್ಷದ ಶುಭಾಶಯಗಳೊಂದಿಗೆ
**ಎಂ. ಶಿವಣ್ಣ**
ಕಾರ್ಪೋರೇಟರ್, 26ನೇ ವಾರ್ಡ್, ಹೆಬ್ಬಾಳ್
ಮೈಸೂರು ಮಹಾನಗರಪಾಲಿಕೆ, ಮೈಸೂರು
ಮೊ : 9449841026

ಹೊಸ ವರ್ಷದ ಶುಭಾಶಯಗಳೊಂದಿಗೆ
**ಸಿ.ಪಿ. ತಮ್ಮಣ್ಣ**
ರಾಜಕೀಯ ಮುಖಂಡರು
ಜನಮನರಂಗ, ಸಿದ್ಧಾರ್ಥನಗರ, ಮೈಸೂರು.
ಮೊ : 9620752999

ಹೊಸ ವರ್ಷದ ಶುಭಾಶಯಗಳೊಂದಿಗೆ
**ಶ್ರೀಲಕ್ಷ್ಮಿ ಮಹಿಳಾ ತರಬೇತಿ ಸಂಸ್ಥೆ**
ಯುವತಿಯರಿಗಾಗಿ ಟೈಲರಿಂಗ್ ಫ್ಯಾಷನ್ ಡಿಸೈನಿಂಗ್,
ಬ್ಯೂಟಿಷಿಯನ್ ಕೋರ್ಸ್, ಕಸೂತಿ ಕೆಲಸ,
ಮೆಹೆಂದಿ ಕೋರ್ಸ್‌ಗಳಿಗೆ
ಸಂಪರ್ಕಿಸಿ. ಮೊ : 9611066634.

ಹೊಸ ವರ್ಷದ ಶುಭಾಶಯಗಳೊಂದಿಗೆ
**ತೇಜಸ್ ಬಿಲ್ಡರ್ಸ್, ಮೈಸೂರು**
ಸರ್ಕಾರಿ ನೌಕರರಿಗೆ ಮಾತ್ರಾ ಯಾವುದೇ ಅಡ್ವಾನ್ಸ್ ಇಲ್ಲದೆ ಶೇಕಡಾ 25ರಷ್ಟು ಕೆಲಸ ಮುಗಿಯುವವರೆಗೆ ಸಾಮಾನು ಸಹಿತ ವಾಸ್ತು ಪ್ರಕಾರ ಅಂದವಾಗಿ ಮನೆಯನ್ನು ಕಟ್ಟಿಕೊಡಲಾಗುವುದು.
ಸಂಪರ್ಕಿಸಿ : 8970308730 / 9845849004

**ಮಹಿಳಾ ವಿಶೇಷ**
ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ
(ಪ್ರತಿ ಮಂಗಳವಾರ)
ಮೈಸೂರು ಕಛೇರಿ :
C/o ಜನಶ್ರೀ ಸೋಲಾರ್
ಸಂಖ್ಯೆ : ಸಿ.ಹೆಚ್. 52, 7ನೇ ಮುಖ್ಯರಸ್ತೆ, 5ನೇ ಕ್ರಾಸ್,
ಸರಸ್ವತಿಪುರಂ, (ಸಿಂಡಿಕೇಟ್ ಬ್ಯಾಂಕ್ ಹಾಗೂ ವಿಜಯಾಬ್ಯಾಂಕ್ ಮಧ್ಯೆ)
ಮೈಸೂರು - 570 009
ಹೆಚ್.ವಿ. ವೆಂಕಟಸುಬ್ಬರಾವ್, ಸಂಪಾದಕರು 8880334444
(ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನೌಕರ)

Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed at Annapoorna Offset Printer, #511, 14th Main, Saraswathipuram, Mysore-570009. Bangalore Office:#734, New Masjid Road, Near Metro Statn., T.Dasarahalli, Bangalore-560057 Mob.:8880334444,Email:mahilavishesha@yahoo.com Editor: H.V. Venkatasubbarao, Decl.No.: MAG.90/2015-16